

# ಈಶಾನ್ಯ ಸ್ಪೆಷಲ್

## ಇದು ರಾಜಾ ಮೆಣಸಿನಕಾಯಿ!



‘ಕಿಂಗ್’ ಚಿಲ್ಲಿ’ ಎಂದು ಕರೆಸಿಕೊಳ್ಳುವ ಮಣಿಪುರದ ಮೆಣಸಿನಕಾಯಿ ತನ್ನ ಖಾರದಿಂದಾಗಿ ಗಿನ್ನೆಸ್ ದಾಖಲೆಯ ಗೌರವ ಪಡೆದಿದೆ. ಎರಡು ಕಿಂಗ್ ಚಿಲ್ಲಿ ತಿಂದರೆ ಸತ್ತೇ ಹೋಗಬಹುದು ಎನ್ನುತ್ತಾರೆ ಅಲ್ಲಿನ ಜನ.

■ ಮಲ್ಲಿಕಾರ್ಜುನ ಹೊಸಪಾಳ್ಯ

ಈಶಾನ್ಯ ರಾಜ್ಯಗಳು ಹಲವು ಅಚ್ಚರಿಗಳ ಆಗರ. ಅಲ್ಲಿನ ದಟ್ಟ ಕಾಡು, ಭೂವಿನ್ಯಾಸ, ಭಾಷೆ, ಆಹಾರ, ಕೃಷಿ ವೈವಿಧ್ಯ ಬೆರಗು ಹುಟ್ಟಿಸುತ್ತದೆ. ಜಗತ್ತಿನ ಅತಿ ಖಾರದ ಮೆಣಸಿನಕಾಯಿ ಎಂದು ಗಿನ್ನೆಸ್ ದಾಖಲೆ ಪಡೆದ ‘ಕಿಂಗ್ ಚಿಲ್ಲಿ’ ಅಂತಹ ಅಚ್ಚರಿಗಳಲ್ಲೊಂದು.

ನಾವು ಮಣಿಪುರದ ‘ರಾಷ್ಟ್ರೀಯ ದೇಸೀ ಬೀಜ ಸಮಾವೇಶ’ಕ್ಕೆ ಹೊರಡುವ ತಯಾರಿಯಲ್ಲಿದ್ದೆವು. ಅಲ್ಲಿ ಏನೇನು ನೋಡಬೇಕು ಎಂಬ ಚರ್ಚೆ ವ್ಯಾಟ್ಸ್ಯಾಪ್ ಗುಂಪಿನಲ್ಲಿ ಕಾವು ಪಡೆದಿತ್ತು. ಆಗ ಕಿಂಗ್ ಚಿಲ್ಲಿ ನೋಡಲು ಮರೆಯದಿರಿ ಎಂಬ ಕೃಷ್ಣಪ್ರಸಾದರ ಸಂದೇಶ ಪ್ರತ್ಯಕ್ಷ. ನಮ್ಮ ಗುಂಪಿನ ವೈರಾಗ್ಯ ಪ್ರಚೋದಕರೊಬ್ಬರು ‘ವಿಶ್ವ ಪ್ರಸಿದ್ಧ ಬ್ಯಾಡಗಿ ಮೆಣಸಿನಕಾಯಿ ರಾಜ್ಯದವರು ನಾವು, ಇಂಥಾದ್ದೆಲ್ಲಾ ಎಷ್ಟು ನೋಡಿಲ್ಲ’ ಎಂಬ ನಿರಾಶಾ ಹೇಳಿಕೆ ಕೊಟ್ಟರು. ನಮಗೂ ಹೌದೆನಿಸಿತು. ಗೇಣುದ್ದದ ಬ್ಯಾಡಗಿ, ಅರ್ಧ ಇಂಚಿನ ಗಗನಮುಖಿ, ಖಾರಮಯ ಗುಂಟೂರು, ಮೀಡಿಯಂ ಖಾರದ ಮಂಚಿಬೆಟ್ಟ ಮುಂತಾದ ಹಲವು ಮೆಣಸಿನಕಾಯಿಗಳನ್ನು ನೋಡಿ, ತಿಂದು ಕಣ್ಣೀರು ತರಿಸಿಕೊಂಡವರು ನಾವು. ಅವುಗಳ ಮುಂದೆ ಕಿಂಗ್ ಚಿಲ್ಲಿ ಯಾವ ಲೆಕ್ಕ? ಬಹುಶಃ ಅದೊಂದು ಆ ಭಾಗದ ತಳಿ ಇರಬಹುದು ಎಂದುಕೊಂಡೆವು.

ಸಮಾವೇಶದಲ್ಲಿ ಮಣಿಪುರದ ಕಾಮ್‌ಜೊಂಗ್ ಜಿಲ್ಲೆ ಮಂಥೋರಮ್ ಹಳ್ಳಿಯ ರೈತರು ಒಂದು ಮಳಿಗೆ